ವಿಷ್ಣುದೇವ ಸದ್ದಾಗದಂತೆ ಮಂಚ ಬಿಟ್ಟೆದ್ದು ಕಿಟಕಿಯ ಬಳಿ ಬಂದು ನಿಂತ. ಅತ್ತ ದೊಡ್ಡ ನಗರವೂ ಅಲ್ಲದ ಇತ್ತ ಹಳ್ಳಿಯೂ ಅಲ್ಲದ ಸಣ್ಣ ಪಟ್ಟಣ. ಎಕರೆಗಟ್ಟಲೆ ವ್ಯಾಪಿಸಿರುವ ದೊಡ್ಡದಾದ ಕಾಂಪೌಂಡಿನೊಳಗೆ ಲಕ್ಷ್ಮೀ ವೆಂಕಟೇಶ ಮೆಡಿಕಲ್ ಕಾಲೇಜು, ಲಕ್ಷ್ಮೀ ನರಸಿಂಹ ಡೆಂಟಲ್ ಕಾಲೇಜು, ಲಕ್ಷ್ಮೀಪತಿ ಎಂಜಿನಿಯರಿಂಗ್ ಕಾಲೇಜುಗಳ ಜೊತೆಗೆ ಇನ್ನೂ ಕೆಲವು ಸಣ್ಣಪುಟ್ಟ ಕಾಲೇಜುಗಳು. ಇವುಗಳನ್ನೆಲ್ಲ ಸ್ಥಾಪಿಸಿ ನಡೆಸಿಕೊಂಡು ಬರುತ್ತಿರುವ ಮಹಾನ್ ಭಕ್ತ ಕೃಷ್ಣಸೆಟ್ಟಿಯವರು ಕಟ್ಟಿಸಿದ ವೈಭವಯುತ ಲಕ್ಷ್ಮೀನಾರಾಯಣ ದೇವಸ್ಥಾನ.

ನಿನ್ನೆ ಇಲ್ಲಿ ಜಾತ್ರೆ ಅಂತ ಲಕ್ಷ್ಮಿಯ ಒತ್ತಾಯಕ್ಕೆ ಕಟ್ಟುಬಿದ್ದು ಪತ್ನೀಸಮೇತನಾಗಿ ವಿಷ್ಣು ಇಲ್ಲಿಗೆ ಬಂದಿದ್ದ. ಗರ್ಭಗುಡಿಯ ಕಿಟಕಿಯಿಂದಲೇ ವಿಷ್ಣು ಸುತ್ತಲೂ ಕಣ್ಣು ಹಾಯಿಸಿದ. ಇಲ್ಲಿಯ ಎಲ್ಲ ವ್ಯಾಪಾರೀ ಸಂಸ್ಥೆಗಳ ಬೋರ್ಡುಗಳಲ್ಲಿಯೂ ಕೃಷ್ಣಸೆಟ್ಟಿಯವರ ಫೇವರೆಟ್ ದೇವರು ಹಾಗೂ ತನ್ನ ಹೆಂಡತಿ ಲಕ್ಷ್ಮಿ ಪರ್ಮನೆಂಟ್ ಸ್ಥಾನ ಗಳಿಸಿದ್ದರೆ, ಅವಶ್ಯಕತೆಗೆ ಅನುಸಾರವಾಗಿ ತಾನು ಬೇರೆಬೇರೆ ಹೆಸರು ಹೊತ್ತು ಕೆಲವು ಕಡೆ ಅವಳೊಂದಿಗೆ ಪೋಸು ಕೊಟ್ಟಿದ್ದೇನೆ! ಲಕ್ಷ್ಮಿ ಮೆಡಿಕಲ್ಸ್, ಹೋಟೆಲ್ ಲಕ್ಷ್ಮಿ ಜನಾರ್ದನ, ಜಯಲಕ್ಷ್ಮಿ ಟೆಕ್ಸ್‌ಟೈಲ್ಸ್, ಲಕ್ಷ್ಮೀಕಾಂತ ಹೇರ್ ಡ್ರೆಸ್ಸರ್ಸ್... ಇತ್ಯಾದಿ ಇತ್ಯಾದಿ, ಆಶ್ಚರ್ಯ ಅಂದರೆ ಪಟ್ಟಣದ ಉದ್ದಗಲಕ್ಕೂ ಸಾಲು ಸಾಲು ವಿದ್ಯಾ ಸಂಸ್ಥೆಗಳೇ ತಲೆಯೆತ್ತಿ ನಿಂತಿದ್ದರೂ ವಿದ್ಯಾಧಿದೇವತೆ ಶಾರದೆಯ ಸಣ್ಣ ಒಂದು ಫೋಟೊ ಕೂಡ ಎಲ್ಲೂ ಕಾಣಸಿಗಲಿಲ್ಲ. ಎಲ್ಲಾ ಕಡೆ ಲಕ್ಷ್ಮಿಯೇ! ಓಹೋ ಅಲ್ಲೊಂದು ಬೋರ್ಡಿದೆ... ವಿದ್ಯಾಲಕ್ಷ್ಮಿ ಕೋಚಿಂಗ್ ಸೆಂಟರ್! ವಿದ್ಯಾಲಕ್ಷ್ಮಿ ಎಂದರೆ ಶಾರದೆಯಲ್ಲವೇ! ತನಗೆ ತಾನೇ ಸಮಾಧಾನ ಹೇಳಿಕೊಂಡ ವಿಷ್ಣು.

ವಿಷ್ಣು ಇಡಿಯ ಕಿಟಕಿಯ ಪರದೆ ಪೂರ್ತಿಸರಿಸಿ ನಗರಸೌಂದರ್ಯ ಆಸ್ವಾದಕ್ಕೆ ತೊಡಗಿದ. ಇನ್ನು ಸ್ವಲ್ಪ ಹೊತ್ತಿನಲ್ಲಿ ಬೆಳಗಾಗುವ ಲಕ್ಷಣವೋ ಎಂಬಂತೆ ಎದುರಿಗಿದ್ದ ಕಟ್ಟಡಗಳ ಆಚೆಬದಿಯಿಂದ ಕೆಂಬಣ್ಣದ ಕಿರಣಗಳೊಂದಿಗೆ ಸೂರ್ಯನೆಲ್ಲೋ ದೂರದಿಂದ ಇಣುಕುತ್ತಿದ್ದಾನೆ ಎನಿಸಿತು. ದಿನಕ್ಕೆ ಇಪ್ಪತ್ತನಾಲ್ಕು ಗಂಟೆ ಸಾಕಾಗದ ಹಲವಾರು ಹುಲುಮಾನವರು ಅದಾಗಲೇ ಎದ್ದು ಸೈಕಲಿನಿಂದ ಹಿಡಿದು ದೊಡ್ಡ ರೈಲುಗಳವರೆಗೆ ಯಾವುದಾದರೊಂದು ವಾಹನವೇರಿ ಹೊರಟಿದ್ದರು. ಗೇಟಿನ ಬಳಿ ಕಣ್ಣುಗೂರುತ್ತಿದ್ದ ಸೆಕ್ಯುರಿಟಿಯವನು ಎದ್ದು ರಾತ್ರಿ ಒಳಗೆ ಬಿಟ್ಟಿದ್ದ ದನಕರುಗಳನ್ನೆಲ್ಲ ಎಬ್ಬಿಸಿ ಹೊರಗಟ್ಟುತ್ತಿದ್ದ. ದೊಡ್ಡ ಹೆಡಿಗೆ ಹಿಡಿದು ಬಂದಿದ್ದ ಒಬ್ಬಳು ಹೆಂಗಸು ಉಂಡಾಡಿ ದನಕರುಗಳು ಹಾಕಿದ್ದ ಸೆಗಣಿ ಸಂಗ್ರಹಿಸುತ್ತಾ ನಡೆಯುತ್ತಿದ್ದಳು. ಸೆಕ್ಯೂರಿಟಿಯವ ಹೀಗೆ ಸೆಗಣಿ ಸಂಗ್ರಹಕ್ಕೆಂದೇ ಉಂಡಾಡಿ ಜಾನುವಾರುಗಳನ್ನು ರಾತ್ರಿ ಗೇಟಿನೊಳಕ್ಕೆ ಬಿಡುತ್ತಿದ್ದಾನೆ ಎಂದು ಕಾಣುತ್ತೆ. ಆ ಹೆಂಗಸು ಆತನ ಮಡದಿಯಿರಬೇಕು. ಏನು ಐಡಿಯಾ! ಆ ಸಗಣಿ ತಟ್ಟಿದರೆ ಬೆರಣಿಯಾದೀತು... ನಾಲ್ಕೈದು ದಿನ ಅಡುಗೆ, ಸ್ನಾನಕ್ಕೆ ಹಿತವಾದ ಬಿಸಿನೀರು.. ತಟ್ಟದೇ ಹಾಗೆಯೇ ಮಣ್ಣಿನೊಂದಿಗೆ ಬೆರೆಸಿದರೆ ಗೊಬ್ಬರ... ಅಗ್ಯಾನಿಕ್ ಗೊಬ್ಬರ... ಹೈವೇ ಬದಿಯಲ್ಲಿ ಮಾರಾಟಕ್ಕಿಟ್ಟರೆ ಸಿಟಿಯವರೆಲ್ಲ ಕೈತೋಟಕ್ಕೆ ಹಾಕಲು ಮುಗಿಬಿದ್ದು ಕೊಂಡುಕೊಳ್ತಾರೆ... ಗೊಬ್ಬರ, ಆಹಾರ... ಎಲ್ಲೆಲ್ಲೂ ಈದೀಗ ಆಗ್ಯಾನಿಕ್ ಭರಾಟೆ. ದೇವರು ಕೊಟ್ಟ ಆರೋಗ್ಯ, ಕಣ್ಣು ಕೈಕಾಲುಗಳನ್ನು ಹಣಕ್ಕಾಗಿ ದೋಚುವವರಿಂದ ಕಾಪಾಡಿಕೊಳ್ಳುವ ಹಣವಂತರ ಹರಸಾಹಸ! ಮನಸಾರೆ ನಕ್ಕ ವಿಷ್ಣು.

ಎಲ್ಲ ದನಕರುಗಳನ್ನು ಹೊರಗಟ್ಟಿದಾತ ಅದೊಂದನ್ನು ಯಾಕೆ ಅಲ್ಲೇ ಬಿಟ್ಟಿದ್ದಾನೆ? ಓಹೋ ತಂಬಿಗೆ ತಂದಿರುವ ಆತನ ಹೆಂಡತಿ ಸೆಗಣಿ ಸಂಗ್ರಹಿಸಿದ ಅದೇ ಕೈಯನ್ನು ಒರೆಸಿ ಅದರ ಹಾಲು ಹಿಂಡುತ್ತಿದ್ದಾಳೆ! ಕರುವಿನ ಬದಲಿಗೆ ಯಾವುದೋ ಒಂದು ಪ್ಲಾಸ್ಟಿಕ್ ಆಟಿಕೆ ಬಳಸಿ ಆಕೆ ದನ ಹಾಲಿಳಿಸುವಂತೆ ಮಾಡುತ್ತಿದ್ದಾಳೆ ಭಲೇ... ಅದು ಅವರ ದನವೇ ಇರಬಹುದೇ? ಅಥವಾ